## ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**:20/2024

ಎಂ.ಡಬ್ಲ್ಯೂ-1

**ದಿನಾಂಕ 19.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಂ.ಎಸ್.ವಿ ವಕೀಲರಿಂದಃ**

1 ನೇ ಪಕ್ಷಗಾರರ ಕೆಲಸವನ್ನು ಕಾನೂನಿನಡಿಯಲ್ಲಿ ನಿಯಮಗಳನ್ನು ಪಾಲನೆ ಮಾಡದೆ ಕೆಲಸ ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಎಲ್ಲ ವಿಚಾರಗಳನ್ನು ತಿಳಿದುಕೊಂಡು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿ. 1 ನೇ ಪಕ್ಷಗಾರರ ಸಂಖ್ಯೆ 1 ರವರು 2011 ನೇ ಇಸವಿಯಲ್ಲಿ ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಮ್ಮಿ ಜನ ಇದ್ದಾರೆ ಎಂದು ಕಂಡು ಬಂದಾಗ ಅವರ ಸಂಬಂದಿಕರನ್ನು ಕರೆಸಿಕೊಂಡು ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. 1 ನೇ ಪಕ್ಷಗಾರರ ಸಂಖ್ಯೆ-2 ರವರನ್ನು 2002 ನೇ ಇಸವಿಯಲ್ಲಿ ನೇಮಕ ಮಾಡಿಕೊಂಡಿದ್ದೆವೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರಿಗೆ ನಾವು ಪ್ರತಿ ತಿಂಗಳು ಸಂಬಳ ನೀಡುತ್ತಿದ್ದೆವವು ಎಂದರೆ ಗೌರವ ಧನ ಕೊಡುತ್ತಿದ್ದೇವು ಎನ್ನುತ್ತಾರೆ. ಅವರಿಗೆ ಗೌರವ ಧನ ವನ್ನು ಹಣದ ರೂಪದಲ್ಲಿ ನೀಡುತ್ತಿದ್ದೇವು ಎನ್ನುತ್ತಾರೆ. ನಾವು ಆ ಸಂಬಂದ ಯಾವುದೇ ಪುಸ್ತಕಗಳನ್ನು ಇಟ್ಟಿರುವುದಿಲ್ಲ. ನಾವು 1 ನೇ ಪಕ್ಷಗಾರರಿಗೆ ಗೌರವ ಧನ ನೀಡುತ್ತಿರಲಿಲ್ಲ ಯಾವುದೇ ಪುಸ್ತಕವನ್ನು ಇಟ್ಟಿಲ್ಲ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ನಾವು ಪ್ರತಿ ತಿಂಗಳ 15 ನೇ ತಾರೀಕಿನಂದು ಸಂಬಳ ನೀಡುತ್ತಿದೇವು ಎಂದರೆ ಗೌರವ ಧನ ನೀಡುತ್ತಿದೇವು ಎನ್ನುವರು.

ಲಕ್ಷ್ಮಿ ನಾರಾಯಣ ಎನ್ನುವವರು ಜಗನ್ ಮೋಹನ ಪ್ಯಾಲಸ್ ನಲ್ಲಿ ಕಾರ್ಯಾದರ್ಶಿಯಾಗಿದ್ದರು. ಸದರಿ ಲಕ್ಷ್ಮಿನಾರಾಯಣರವರು ಶ್ರೀ ಕಂಠದತ್ತ ನರಸಿಂಹರಾಜ್ ಒಡಯರ್ ಎಲ್ಲಾ ಕೆಲಸಗಳಲ್ಲಿ ಜಿ.ಪಿ.ಎ ಆಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸದರಿ ಶ್ರೀ ಕಂಠದತ್ತ ನರಸಿಂಹರಾಜ್ ಒಡಯರ್ ಹಾಗೂ ಮೈಸೂರು ಜಿಲ್ಲಾ ಮಜ್ದೂರು ಸಂಘ ರವರು ಒಡಂಬಡಿಕೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಒಡಂಬಡಿಕೆ 2011 ರಿಂದ 2014 ರ ವರೆಗೆ ಮುಂದುರೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಒಡಂಬಡಿಕೆ ಯಲ್ಲಿ 1 ನೇ ಪಕ್ಷಗಾರರ ಸಂಖ್ಯೆ-1 ಮತ್ತು 2 ರವರ ಹೆಸರುಗಳು ಪಟ್ಟಿಯಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪಕ್ಷಗಾರರಿಗೆ ನಾವು Basic, Special Allowance, VDA, Conveyances, Educational allowances ಇಷ್ಟನ್ನು ಸೇರಿ ನಾವು ಅವರಿಗೆ ಸಂಬಳ ನೀಡುತ್ತಿದ್ದೇವು ಎಂದರೆ ನನಗೆ ಗೊತ್ತಿಲ್ಲ. ಸದರಿ ಒಡಂಬಡಿಕೆ ಪ್ರಕಾರ 1 ನೇ ಪಕ್ಷಗಾರರ ಸಂಖೆ 2 ರವರಿಗೆ ರೂಪಾಯಿ 6,879/- ಸಂಬಳ ಕೊಡುತ್ತಿದ್ದೇವು ಎಂದರೆ ಗೌರವ ಧನ ಕೊಡುತ್ತಿದ್ದೇವು ಎನ್ನುತ್ತಾರೆ. ಆದೇ ರೀತಿ 1 ನೇ ಪಕ್ಷಗಾರರ ಸಂಖ್ಯೆ 1 ರವರಿಗೆ ರೂಪಾಯಿ 6,500/-ಸಂಬಳ ಕೊಡುತ್ತಿದ್ದೇವು ಎಂದರೆ ಗೌರವ ಧನ ಕೊಡುತ್ತಿದ್ದೇವು ಎನ್ನುತ್ತಾರೆ.

1 ನೇ ಪಕ್ಷಗಾರರ ಸಂಖ್ಯೆ 2 ರವರು ಕೆಲಸವನ್ನು ನಿರಾಕರಿಸುವ ವೇಳೆಗೆ ನಾವು ಅವರಿಗೆ ರೂ.8,530/- ಸಂಬಳ ಕೊಡುತ್ತಿದ್ದೇವು ಎಂದರೆ ಗೌರವ ಧನ ಕೊಡುತ್ತಿದ್ದೇವು ಎನ್ನುತ್ತಾರೆ. ಅದೇ ರೀತಿ 1 ನೇ ಪಕ್ಷಗಾರರ ಸಂಖ್ಯೆ 1 ರವರು ಕೆಲಸವನ್ನು ನಿರಾಕರಿಸುವ ವೇಳೆಗೆ ನಾವು ಅವರಿಗೆ ರೂ.8,450/- ಸಂಬಳ ಕೊಡುತ್ತಿದ್ದೇವು ಎಂದರೆ ಗೌರವ ಧನ ಕೊಡುತ್ತಿದ್ದೇವು ಎನ್ನುತ್ತಾರೆ.

ಆನೆಗಳನ್ನು ಹಾಗೂ ಒಂಟೆಗಳನ್ನು ನೋಡಿಕೊಳ್ಳಲು ಅವರಿಗೆ ವಿಶೇಷ ಜ್ಞಾನ ಇರಬೇಕು ಎಂದರೆ ಹೌದು. ಸಾಮಾನ್ಯ ಜನರನ್ನು ಆನೆ ಮತ್ತು ಒಂಟೆಗಳ ಹತ್ತಿರ ಬಿಡುವುದಿಲ್ಲ ಎಂದರೆ ಸರಿ. ಹಾಗೇನಾದರೂ ಮಾಡಿದರೆ ಅವಘಡ ಗಳು ಸಂಭವಿಸುತ್ತವೆ ಎಂದರೆ ಹೌದು. 1 ನೇ ಪಕ್ಷಗಾರರ ಸಂಖ್ಯೆ-1 ರವರು ಆನೆಗಳಿಗೆ ಆಹಾರ ಕೊಡುವಂತಹ ಕೆಲಸ ಹಾಗೂ ಅದನ್ನು ಸ್ವಚ್ಚತೆಗೊಳಿಸುವ ಕೆಲಸ ಮಾಡುತ್ತಿದ್ದರು ಹಾಗೂ ಅದರ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾದರೆ ನನಗೆ ತಿಳಿಸುವ ಕೆಲಸ

ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಸಂಖ್ಯೆ 2 ರವರು ಒಂಟೆಗಳಿಗೆ ಆಹಾರ ಕೊಡುವಂತಹ ಕೆಲಸ ಹಾಗೂ ಅದನ್ನು ಸ್ವಚ್ಚತೆಗೊಳಿಸುವ ಕೆಲಸ ಮಾಡುತ್ತಿದ್ದರು ಹಾಗೂ ಅದರ ಆರೋಗ್ಯ ದಲ್ಲಿ ವ್ಯತ್ಯಾಸ ಉಂಟಾದರೆ ನನಗೆ ತಿಳಿಸುವ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 1 ನೇ ಪಕ್ಷಗಾರರ ಆನೆ ಮತ್ತು ಒಂಟೆ ಗಳನ್ನು ಸ್ವಚ್ಚತೆ ಗೊಳಿಸುವುದು ಹಾಗೂ ಆಹಾರವನ್ನು ತಯಾರುಮಾಡಿಕೊಡುವುದು ಮಾಡುತ್ತಿದ್ದರು.

1 ನೇ ಪಕ್ಷಗಾರರ ಸಂಖ್ಯೆ 1 ರವರು ಬೆಳಗ್ಗೆ 7 ಗಂಟೆಯಿಂದ 11 ರವರಗೆ ಹಾಗೂ ಮಧಾಹ್ನ 2 ಗಂಟೆಯಿಂದ ಸಂಜೆ 6 ಗಂಟೆ ಯವರಗೆ ನಮ್ಮಲ್ಲಿ ಕೆಲಸಮಾಡುತ್ತಿದ್ದರು ಎಂದರೆ ಹೌದು. ಈ ರೀತಿ ಅವರು ಕೆಲಸ ಮಾಡುವುದಕ್ಕೆ ಪ್ರತಿ ತಿಂಗಳು ನಾವು ಸಂಬಳ ನೀಡುತ್ತಿದ್ದೇವು ಎಂದರೆ ಗೌರವ ಧನ ನೀಡುತ್ತಿದ್ದೆವು ಎನ್ನುತ್ತಾರೆ. 1 ನೇ ಪಕ್ಷಗಾರರ ಸಂಖ್ಯೆ 1 ರವರು 2011 ರಿಂದ 2021 ರವರೆಗೆ ನಿರಂತರವಾಗಿ ನಮ್ಮ ಸಂಸ್ಥೆಯಲ್ಲಿ ಕೆಲಸಮಾಡುತ್ತಿದಾರೆ ಎಂದರೆ ಆಗ್ಗಾಗ್ಗೆ ಬಂದು ಕೆಲಸ ಮಾಡುತ್ತಾರೆ ಎನ್ನುವರು. ಆಗ್ಗಾಗ್ಗೆ ಎಂದರೆ ಏನು ಎಂದರೆ ಸಾಕ್ಷಿ ಅವರಿಗೆ ಅನುಕೂಲವಾಗುವಾಗ ಬಂದು ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ಅವರಿಗೆ ಅನುಕೂಲವಾದಾಗ ಅವರು ನಮ್ಮ ಸಂಸ್ಥೆಗೆ ಬಂದರೆ ಕೆಲಸ ಕೋಡುತ್ತಿದ್ದರೆ ಎಂದರೆ ಕೆಲಸ ಇದ್ದರೆ ಕೋಡುತ್ತಿದ್ದೇವು ಇಲ್ಲವಾದರೆ ವಾಪಸ್ಸು ಕಳುಹಿಸುತ್ತಿದ್ದೇವು ಎನ್ನುತ್ತಾರೆ. ಇದಕ್ಕೆ ಸಂಬಂದ ಪಟ್ಟಂತೆ ಯಾವುದಾದರೂ ದಾಖಲೆಯನ್ನು ನ್ಯಾಯಾಲಯ ಮುಂದೇ ಹಾಜರು ಮಾಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಈ ಸಂಬಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಯಲ್ಲ.

ಶ್ರೀ ಕಂಠ ದತ್ತ ನರಸಿಂಹ ರಾಜ ಒಡಯರ್ ಬದುಕಿದ್ದಾಗ Palace Stable & Regency studs ಎಂದು ಆಡಳಿತ ವರ್ಗ ಇತ್ತು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಾವು Regency studs ಪಾರ್ಮ್ ನ್ನು ನಡೆಸುತ್ತಿದ್ದೇವು ಅದರಲ್ಲಿ ಮಾವುತರು ಹಾಗೂ ಕಾವಡಿಗರು

ಹಾಗೂ Farm–1 ಇತ್ತು ಎಂದರೆ ಸಾಕ್ಷಿ Stud Farm ಇರಲಿಲ್ಲ ಎನ್ನುತ್ತಾರೆ. ಈಗಲೂ stud Farm ನಲ್ಲಿ ಆಗ ಯಾರು ಕೆಲಸಮಾಡುತ್ತಿದ್ದರು ಈಗಲೂ ಅವರೇ ಕೆಲಸಮಾಡುತ್ತಾರೆ ಎಂದರೆ ಅವರುಗಳ ಪೈಕಿ ಇಬ್ಬರು ಇರುವುದಿಲ್ಲ ಎನ್ನುತ್ತಾರೆ. ನಂಜುಡ, ರಮೇಶ, ಎಸ್.ಮಹದೇವ , ಎಲ್. ಮಂಜು, ಪುಟ್ಟ, ಲೋಕೇಶ, ವೆಂಕಟ, ಸಾದಿಕ್ ಪಾಷ, ಅಶ್ವಕ್ ಶರೀಪಿ, ಅನ್ಸರ್ ಪಾಷ, ದಸ್ತಗಿರಿ ಪಾಷ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರಿಗೂ ಕೂಡ ಪ್ರತಿ ತಿಂಗಳು ನಾವು ಸಂಬಳ ನೀಡುತ್ತಿದ್ದೇವು ಎಂದರೆ ಎಲ್ಲರಿಗೂ ಗೌರವ ಧನವನ್ನು ನೀಡುತ್ತಿದ್ದೇವು ಎನ್ನುತ್ತಾರೆ.

1 ನೇ ಪಕ್ಷಗಾರರು ಸ್ವಯಂ ಸೇವಕರಾಗಿ ಕೆಲಸ ಮಾಡುವ ಕೆಲಸಗಾರಾರಿರುವುದಿಲ್ಲ ಎಂದರೆ ಸರಿಯಲ್ಲ. ಇದ್ದಕ್ಕೆ ಸಂಬದಪಟ್ಟಂತೆ 1 ನೇ ಪಕ್ಷಗಾರರಿಗೆ ಯಾವುದೇ ಗುರುತಿನ ಚೀಟಿ ನೀಡಿಲ್ಲ. 1 ನೇ ಪಕ್ಷಗಾರು ದಸರಾ, ಕೃಷ್ಣ ಉತ್ಸಾವ ಹಾಗೂ ಜನಗಳು ಕಡಿಮೆ ಇದ್ದಗಾ ಬಂದು ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದರು. ಆ ಸಂಬಂದ 1 ನೇ ಪಕ್ಷಗಾರರು ಸ್ವಯಂ ಸೇವಕರಾಗಿ ಕೆಲಸ ಮಾಡಿರುವ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. 1 ನೇ ಪಕ್ಷಗಾರರು ಸ್ವಯಂ ಸೇವಕರಾಗಿ ಕೆಲಸಕ್ಕೆ ಬರುತ್ತಿದ್ದರು ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವುದು ಸುಳ್ಳು ಎಂದರೆ ಸರಿಯಲ್ಲ.

1 ನೇ ಪಕ್ಷಗಾರರ ಸಂಖ್ಯೆ 1 ರವರು ನಮ್ಮಲ್ಲಿ ಕೆಲಸ ಮಾಡಿರುವುದಕ್ಕೆ ನಿ.ಡಬ್ಲ್ಯೂ–1 ರ ದಾಖಲೆಯನ್ನು ನೀಡಿರುತ್ತೇವೆ ಎಂದರೆ ಸಾಕ್ಷಿ ಕೋವಿಡ್ ಸಮಯದಲ್ಲಿ ಅದನ್ನು ನೀಡಿರುತ್ತೇವೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಕೋವಿಡ್ ಸಮಯದಲ್ಲಿ ಒಳಗೆ ಬರಬಹುದು ಹಾಗೂ ಹೊರಗೆ ಹೋಗಬಹುದು ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಅವರು ರಸ್ತೆಯಲ್ಲಿ ಒಡಾಡಿಕೊಂಡು ಅರಮನೆಯಲ್ಲಿ ಕೆಲಸ ನಿರ್ವಹಿಸಬೇಕು ಎನ್ನುವ ಕಾರಣಕ್ಕೆ ಅದನ್ನು

ಕೊಟ್ಟಿದ್ದೇವು ಎನ್ನುತ್ತಾರೆ. ಸದರಿ ಐ.ಡಿ. ಕಾರ್ಡ್ ಅನ್ನು 2011 ನೇ ಇಸವಿಯಲ್ಲಿ 1 ನೇ ಪಕ್ಷಗಾರರು ಕೆಲಸಕ್ಕೆ ಸೇರಿದಾಗ ಕೊಟ್ಟಿರುವ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ.

ದಸರ ಸಮಯದಲ್ಲಿ ಅರಮನೆ ಒಳಗೆ ಬರುವುದಕ್ಕೆ ಐ.ಡಿ.ಕಾರ್ಡ್ ಅನ್ನು ನೀಡಿದ್ದವರು ಪೋಲೀಸ್ ಆಯುಕ್ತರು ಎಂದರೆ ಸಾಕ್ಷಿ ಕಡೆ ದಿನಕ್ಕೆ ಮಾತ್ರ ಅವರು ಕೊಡುತ್ತಿದ್ದರು ಎನ್ನುತ್ತಾರೆ. ಅದೇ ರೀತಿ 1 ನೇ ಪಕ್ಷಗಾರರ ಸಂಖ್ಯೆ–1 ರವರಿಗೆ ಗುರುತಿನ ಚೀಟಿಯನ್ನು ನಮ್ಮ ಕಚೇರಿಯಿಂದ ಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅರಮನೆ ಆವರಣದಲ್ಲಿ Palace office ಎಂದು ಇರುತ್ತದೆ ಎಂದರೆ ಸರಿ. 1 ನೇ ಪಕ್ಷಗಾರರ ಕೆಲಸಕ್ಕೆ, ಸಂಬಳ ಹಾಗೂ ರಜಕ್ಕೆ ಸಂಬಂದಪಟ್ಟಂತೆ ವಿಚಾರಗಳನ್ನು ಸದರಿ ಕಚೇರಿ ನಿರ್ವಹಿಸುತ್ತಿರುತದೆ ಎಂದರೆ ಸರಿ. ಅದೇ ರೀತಿ 1 ನೇ ಪಕ್ಷಗಾರರಿಗೆ ಗುರುತಿನ ಚೀಟಿಯನ್ನು ನಮ್ಮ ಕಚೇರಿಯಿಂದ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಗುರುತಿನ ಚೀಟಿಯ ಮೇಲೆ ಇರುವ ಮೊಹರು ನಮ್ಮ ಪ್ಯಾಲೇಸಿನ ಮೊಹರು ಆಗಿರುತ್ತದೆ ಎಂದರೆ ಸರಿ. ಸದರಿ ಗುರುತಿನ ಚೀಟಿ ಮೇಲೆ ಇರುವ ಲಕ್ಷ್ಮಿ ನಾರಾಯಣ ಎನ್ನುವ ಸಹಿ ಯಾರದ್ದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಪ್ಯಾಲೇಸ್ ಕಚೇರಿ ಹಾಗೂ regency stud farm ನಲ್ಲಿ ಕೊಟ್ಟಿರುವ ಗುರುತಿನ ಚೀಟಿಯನ್ನು ನಮ್ಮದಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು 1 ನೇ ಪಕ್ಷಗಾರರಿಗೆ ಪ್ರತಿ ತಿಂಗಳು ಗೌರವ ಧನ ನೀಡುತ್ತಿರಲಿಲ್ಲ ಸಂಬಳವನ್ನು ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಸಹಾ regency stud farm ಅನ್ನು ಪ್ಯಾಲೇಸ್ ಕಚೇರಿಯವರು ನಡೆಸುತ್ತಿರುತ್ತಾರೆ ಎಂದರೆ ಸಾಕ್ಷಿ stud farm ಇಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರು ನಮ್ಮ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯದ ಮುಂದೆ ಸಲ್ಲಿಸಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯವರು 1 ನೇ ಪಕ್ಷಗಾರರಿಗೆ ಕೆಲಸದ ಜೊತೆ ಹಿಂಬಾಕಿ ವೇತವನ್ನು ನೀಡಲು ಬಾಧ್ಯಸ್ತರಾಗಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**